ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ೨,೭೨,೪೨೦–೧೦ ಎಕರೆಗಳನ್ನು ಹೆಚ್ಚುವರಿ ಎಂದು ಗುರ್ತಿಸಲಾಗಿದೆ. ಈ ಪೈಕಿ ೧೧೬,೯೧೭ ಎಕರೆ ಭೂಮಿಯನ್ನು ಭೂ ರಹಿತರಿಗೆ ಹಂಚಲಾಗಿದೆ.

ಆ) ಇಂತಹ ಎರಡು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ರಾಜ್ಯ ಮೇಲ್ಮನವಿ ನ್ಯಾಯಾಧೀಕರಣದ ಸ್ಥಾಪನೆ

೬೪೩. ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಮೇಲ್ಮನವಿ ನ್ಯಾಯಾಧಿಕರಣವು ಯಾವ ದಿನಾಂಕದಿಂದ ಸ್ಥಾಪಿಸಲಾಯಿತು.

ಆ) ಈ ನ್ಯಾಯಾಧಿಕರಣದಲ್ಲಿ ಒಟ್ಟು ದಾಖಲ್ಮಾಡಿದ ಮೇಲ್ಮನವಿಗಳ ಸಂಖ್ಯೆ ಎಷ್ಟು ?

ಇ) ಭೂ ನ್ಯಾಯಾಧಿಕರಣಗಳು ಗೇಣಿದಾರರ ಪರವಾಗಿ ನಿರ್ಣಯಿಸಿದ ಆದೇಶಗಳಿಂದ ನೊಂದ ಭೂ ಮಾಲೀಕರು ಜಿಲ್ಲಾ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಮೇಲ್ಮನವಿಗಳನ್ನು ದಾಖಲ್ಮಾಡಿದಾಗ ಆದೇಶಗಳನ್ನು ತಡೆಹಿಡಿದ ಸಂಖ್ಯೆ ಎಷ್ಟು ?

ಈ) ಮೇಲ್ಮನವಿ ನ್ಯಾಯಾಧಿಕರಣಗಳ ತಡೆ ಆದೇಶಗಳ ಲಾಭ ಪಡೆದು ಗೇಣಿದಾರರನ್ನು ಅವರ ಸ್ವಾಧೀನದಲ್ಲಿರುವ ಜಮೀನುಗಳಿಂದ ಹೊರದೂಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ದಿನಾಂಕ ೧–೧–೧೯೭೬ರಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು ಸ್ಥಾಪಿಸಲ್ಪಟ್ಟಿತು.

ಆ) ಈ ನ್ಯಾಯಾಧಿಕರಣದಲ್ಲಿ ೧೯೮೭ರಲ್ಲಿ ವಿವಿಧ ಅಧಿನಿಯಮಗಳನ್ವಯ ದಾಖಲ್ಮಾಡಲಾದ ಮೇಲ್ಮನವಿಗಳ ಸಂಖ್ಯೆ ೪೭೧೧.

ಇ) ಇಂತಹ ಒಟ್ಟು ೬೩೩ ಪ್ರಕರಣಗಳಲ್ಲಿ ಜಿಲ್ಲಾ ಹಾಗೂ ಅಧಿಕ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳು ತಡೆ ಆದೇಶ ನೀಡಿವೆ.

ಈ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಭೂ ಸುಧಾರಣಾ ಕಾಯಿದೆ ಅನ್ವಯ

೬೪೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್‌ಕಲ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ನ್ಯಾಯ ಮಂಡಳಿ ಮುಂದೆ ಭೂ ಸುಧಾರಣಾ ಕಾಯ್ದೆ ಅನ್ವಯ ಇತ್ಯರ್ಥಕ್ಕೆ ಎಷ್ಟು ಪ್ರಕರಣಗಳು ಬಾಕಿ ಇವೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು).

ಆ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಹೆಚ್ಚುವರಿ ಜಮೀನನ್ನು ಸರ್ಕಾರಕ್ಕೆ ತೆಗೆದುಕೊಂಡಿದ್ದು ಭೂ ರಹಿತರಿಗೆ ಮತ್ತು ಬಡಜನರಿಗೆ ಹಂಚಬೇಕಾದ ಜಮೀನಿನ ವಿಸ್ತೀರ್ಣ, (ಜಿಲ್ಲಾವಾರು ವಿವರಗಳನ್ನು ಕೊಡುವುದು).

ಇ) ಗೇಣಿದಾರರ ಪರವಾಗಿ ತೀರ್ಮಾನವಾಗಿರುವ ಪ್ರಕರಣ ಮತ್ತು ಸಂಖ್ಯೆ ಮತ್ತು ಗೇಣಿದಾರರ ವಿರುದ್ಧ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ?